ಸಾಕ್ಷಿಯನ್ನು ದಿಃ 24-2-2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರಃ ಶ್ರೀ ಎಸ್ ವಾಯ್ ಎಸ್ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಗೆ ಸಂಬಂಧಿಸಿ ಪ್ರಮಾಣ ಪತ್ರವನ್ನು ಹಾಜರ ಪಡಿಸಿದ್ದು, ಅದರಲ್ಲಿ ನಮೂದಿಸಿರುವ ಮಜಕೂರುಗಳು ಸತ್ಯವಾಗಿದ್ದು, ಅದಕ್ಕೆ ನನ್ನ ಸಹಿ ಇದೆ.

ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅವುಗಳನ್ನು ಪುನಃ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಓ ಎಸ್ ನಂ. 35/1972ರ ದಿಃ 12-7-1985ರಂದು ಮಾಡಿರುವ ತೀರ್ಪಿನ ದೃಡಿಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು, ಆರ್ ಎ ನಂ. 57/1985ರ ದಿಃ 8-11-1990ರಂದು ಮಾಡಿರುವ ತೀರ್ಪಿನ ದೃಡಿಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಎಂದು, ದಿಃ 20-1-1965ರ ಕ್ರಯ ಪತ್ರದ ದೃಡಿಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-3 ಎಂದು, ಎಲೆಕ್ಟ್ರೀಶಿಯನ್ ಬಿಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಬಾಡ 1 ಗ್ರಾಮದ ಸರ್ವೆ ನಂ. 231 ರ ಸರ್ವೆ ನಕಾಶೆಯನ್ನು ಗುರುತಿಸಿಕೊಳ್ಳಲು ತೋರಿಸಿದಾಗ ವಾದಿಯ ಪ್ರಾಜ್ಞ ವಕೀಲರು ಸದರಿ ನಕಾಶೆಯನ್ನು ತಯಾರಿಸುವಾಗ ವಾದಿಗಳು ಇರಲಿಲ್ಲ, ಆದಕಾರಣ ನಿಶಾನೆಗೊಳಿಸಲು ಬರುವುದಿಲ್ಲ ಎಂದು ತಕರಾರು ಎತ್ತಿರುತ್ತಾರೆ. ಪ್ರತಿವಾದಿಗಳ ಪ್ರಾಜ್ಞ ವಕೀಲರು ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಸದರಿ ನಕಾಶೆಯನ್ನು ತಯಾರಿಸಿದ್ದು ಅದನ್ನು ನಿಶಾನೆಗೊಳಿಸಬಹುದಾಗಿದೆ ಎಂದು ವಾದ ಮಂಡಿಸಿರುತ್ತಾರೆ. ಉಭಯತ್ರಯರ ವಾದವನ್ನು ಆಲಿಸಿ ದಾಖಲಾತಿಯನ್ನು ಪರಿಶೀಲಿಸಲಾಯಿತು. ಸದರಿ ದಾಖಲಾತಿಯು ಸರ್ವೆ ನಕಾಶೆಯಾಗಿದ್ದು ಅದನ್ನು ಸಮಂಜಸವಾದ ಅರ್ಜಿಯನ್ನು ಸಲ್ಲಿಸಿ ಕಾನೂನಿನ ಚೌಕಟ್ಟಿನ ಒಳಗಡೆ ದೃಡಿಕೃತ ನಕಲನ್ನು ತೆಗೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದು ಕಂಡು ಬರುತ್ತದೆ. ಆದಕಾರಣ, ವಾದಿ ಪರ ಪ್ರಾಜ್ಞ ವಕೀಲರ ತಕರಾರು ಕಾನೂನಿನ ಅಡಿಯಲ್ಲಿ ನಿಲ್ಲುವುದಿಲ್ಲ ಎಂದು ತಿರಸ್ಕರಿಸಿ ಪ್ರತಿವಾದಿಗಳ ಪ್ರಾಜ್ಞ ವಕೀಲರಿಗೆ ದಾಖಲಾತಿಯನ್ನು ಸಾಕ್ಷಿಗೆ ತೋರಿಸಿ ನಿಶಾನೆಗೊಳಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಸಾಕ್ಷಿಯು ಸರ್ವೆ ನಂ. 231ರ ಸರ್ವೆ ಮ್ಯಾಪನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು.

ಆದಕಾರಣ ವಾದಿ ಸಲ್ಲಿಸಿರುವ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ವಾದಿ ಪರವಾಗಿಃ ಶ್ರೀ ಎಸ್ ಕೆ ಪಿ ವಕೀಲರಿಂದಃ**

ಮಾನ್ಯ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.